# ನಿಮ್ಮೊಡನೆ

# ಹಣ ಮರುಳೋ ಜನ ಮರುಳೋ

ಐಎಂಎ ಜನರಿಗೆ ಪಾಠವಾಗಬೇಕು. ಹೂಡಿಕೆಗೆ ದಿಢೀರ್ ದೊಡ್ಡಮೊತ್ತ ಸಿಗದಿದ್ದರೂ ರಾಷ್ಟ್ರೀಕೃತ ಬ್ಯಾಂಕ್, ಅಂಚೆ ಕಚೇರಿಯಂತಹ 'ಸುರಕ್ಷಿತ ತಾಣ'ಗಳನ್ನು ಹುಡುಕಿಕೊಳ್ಳುವುದು ಒಳಿತು. ಎಲ್ಲಿಯವರೆಗೆ ನಾಮ ಹಾಕಿಸಿಕೊಳ್ಳುವವರು ಇರುತ್ತಾರೋ ಅಲ್ಲಿಯವರೆಗೆ ಹಾಕುವವರೂ ಇರುತ್ತಾರೆ.



ಈಶ್ವರ

ಬೆಂಗಳೂರಿನ 'ಐ ಮಾನಿಟರಿ ಅಡ್ವೈಸರಿ' (ಐಎಂಎ) ಸಂಸ್ಥೆಯ ಪ್ರಧಾನ ಕಚೇರಿ ಮುಂದೆ ನೀವು ಈಗೊಮ್ಮೆ ಸುಮ್ಮನೆ ಹಾದು ಬಂದರೂ ಸಾಕು, ಮನ ಕಲುಕುವಂತಹ ನೋಟಗಳೇ ಕಣ್ಣಿಗೆ ಬೀಳುತ್ತವೆ. ಹೊಟ್ಟೆ–ಬಟ್ಟೆ ಕಟ್ಟಿ ಕೂಡಿಟ್ಟಿದ್ದ ಹಣ ಇನ್ನೇನು ದುಪ್ಪಟ್ಟಾಗಿ ಕೈಸೇರಲಿದೆ ಎಂದು ಕಾದಿದ್ದ ಬಡಜೀವಗಳೀಗ ಆ ಕಚೇರಿಯ ಮುಂದೆ ಗರ ಬಡಿದವರಂತೆ ನಿಂತಿವೆ; ಅದೂ ಶೂನ್ಯದತ್ತ ದೃಷ್ಟಿಯನ್ನು ನೆಟ್ಟು. ಮಗಳ ಮದುವೆಗೆ ನೆರವಾದೀತೆಂದು, ತಲೆ ಮೇಲೊಂದು ಸೂರು ಹೊಂದಲು ಅನುಕೂಲವಾದೀತೆಂದು, ಮಗನನ್ನು ವೃತ್ತಿಕೋರ್ಸ್ ಓದಿಸಲು ಸಾಧ್ಯವಾದೀತೆಂದು ಕಾಸಿಗೆ ಕಾಸು ಕಾಪಿಟ್ಟಿದ್ದ ಗಂಟು, ಒಂದೇ ಏಟಿಗೆ ಮಂಗಮಾಯವಾದ ವರ್ತಮಾನ ಬಂದು ಅಪ್ಪಳಿಸಿದ್ದರಿಂದ ಆ ಜೀವಗಳ ಕನಸುಗಳೆಲ್ಲ ಈಗ ಛಿದ್ರ ಛಿದ್ರ. ಅಂಗವಿಕಲರು, ಒಂಟಿ ಮಹಿಳೆಯರು, ಭಿಕ್ಷುಕರು... ಹೀಗೆ ಯಾರೆಲ್ಲರನ್ನು ಸಮಾಜ ವಿಶೇಷ ಕಾಳಜಿ, ಮಮತೆಯಿಂದ ಕಾಣಬೇಕಿತ್ತೋ ಅಂಥವರೂ ಕಾಸು ಕಳೆದುಕೊಂಡವರಲ್ಲಿ ಸೇರಿರುವುದು ಕಳವಳಕಾರಿ. ಹೆಚ್ಚಿನ ಬಡ್ಡಿಯ ಆಮಿಷ ತೋರಿಸಿ, ಕಡಿಮೆ ಅವಧಿಯಲ್ಲಿ ಹಣ ದುಪ್ಪಟ್ಟುಗೊಳಿಸುವ ಭ್ರಮೆ ಮೂಡಿಸಿ ವಂಚನೆ ಮಾಡಿದ ಪ್ರಕರಣವೇನು ಇದೇ ಮೊದಲಲ್ಲ. ಅಗ್ರಿಗೋಲ್ಡ್, ಆ್ಯಂಬಿಡೆಂಟ್, ವಿಕ್ರಂ ಇನ್ವೆಸ್ಟ್‌ಮೆಂಟ್ಸ್, ಡ್ರೀಮ್ಸ್ ಜಿ.ಕೆ., ಷಣ್ಮುಗಂ ಫೈನಾನ್ಸ್, ಹಿಂದೂಸ್ತಾನ್ ಇನ್‌ಫ್ರಾಕಾನ್, ಗೃಹ ಕಲ್ಯಾಣ್, ಟಿಜಿಎಸ್‌ನಂತಹ ಹಲವು ಸಂಸ್ಥೆಗಳು ನಾಯಿಕೊಡೆಯಂತೆ ಹುಟ್ಟಿಕೊಂಡು ಜನರನ್ನು ವಂಚಿಸುತ್ತಲೇ ಬಂದಿವೆ. ಆದರೆ, ತ್ವರಿತವಾಗಿ ಕಾಸು ಮಾಡಬೇಕೆಂಬ ಹಪಹಪಿ ಮತ್ತು ನಮಗೇನೂ ಮೋಸ ಆಗುವುದಿಲ್ಲ ಎಂಬ ಹುಂಬತನ ಜನರನ್ನು ಮತ್ತೆ ಮತ್ತೆ ಇಂತಹ ವಂಚನೆಯ ಖೆಡ್ಡಾದಲ್ಲಿ ಕೆಡುವುತ್ತಲೇ ಇವೆ.

ಐಎಂಎಯ ಮೋಸದ ಜಾಲದೊಳಗೆ 30 ಸಾವಿರಕ್ಕೂ ಹೆಚ್ಚು ಮಂದಿ ಬಿದ್ದಿರುವುದು ಸೋಜಿಗದ ಸಂಗತಿ. ಹಣ ಕಳೆದುಕೊಂಡವರಲ್ಲಿ ಬೆಂಗಳೂರು ಮಾತ್ರವಲ್ಲದೆ ಮೈಸೂರು, ತುಮಕೂರಿನ ಜನ ಕೂಡ ಸೇರಿದ್ದಾರೆ. ಟೋಪಿ ಹಾಕಿಸಿಕೊಳ್ಳಲೂ ಇಷ್ಟೊಂದು ಪೈಪೋಟಿಯೇ? ಹೂಡಿಕೆ ಮಾಡಿದ ಕಾಸಿಗೆ ಹೆಚ್ಚಿನ ಲಾಭಾಂಶವನ್ನು ನೀಡಲಾಗುವುದು ಎನ್ನುವ ಆಮಿಷ ಅವರನ್ನು ಸಂಪೂರ್ಣವಾಗಿ ಕುರುಡರನ್ನಾಗಿಸಿಬಿಟ್ಟಿದೆ. ಚಿಟ್ಸ್ ಫಂಡ್ ವ್ಯವಹಾರದಲ್ಲಿ ಕೂಡ ಹಣ ತೊಡಗಿಸುವವರ ಸಂಖ್ಯೆ ದೊಡ್ಡದಿದೆ. ದುರದೃಷ್ಟವಶಾತ್ ಅವರ್‍ಯಾರಿಗೂ ಇಂತಹ ಮೋಸದ ಪ್ರಕರಣಗಳು ಪಾಠವಾಗುವುದೇ ಇಲ್ಲ. ಮನೆ ಪಕ್ಕದಲ್ಲಿ ನಾಳೆ ಯಾವುದಾದರೂ ಒಂದು ಹೊಸ ಫೈನಾನ್ಸ್ ಕಂಪನಿ ಹುಟ್ಟಿಕೊಂಡು, ಎರಡು ವರ್ಷದಲ್ಲಿ ಹಣ ದುಪ್ಪಟ್ಟು ಮಾಡಿಕೊಡಲಾಗುವುದು ಎಂಬ ಬೋರ್ಡ್ ಹಾಕಿದರೆ ಹಿಂದೆಮುಂದೆ ನೋಡದೆ ಹೂಡಿಕೆ ಮಾಡುತ್ತಾರೆ. ಹೀಗಾಗಿ ವಂಚನೆ ಪ್ರಕರಣಗಳಲ್ಲಿ ಬಲಿಪಶು ಆಗಿರುವವರು ತಮ್ಮನ್ನು ತಾವು ಹಳಿದುಕೊಳ್ಳದೆ ವಿಧಿಯಿಲ್ಲ.

ಸಾರ್ವಜನಿಕರನ್ನು ಮೋಸಗೊಳಿಸುವ ಇಂತಹ ಪ್ರಕರಣಗಳು ಮತ್ತೆ ಮತ್ತೆ ನಡೆಯುತ್ತಿದ್ದರೂ ಸರ್ಕಾರಗಳು ಕಣ್ಮುಚ್ಚಿಕೊಂಡು ಕುಳಿತಿವೆ. ಐಎಂಎ ಪ್ರಕರಣದಲ್ಲಿ ಸಚಿವರು ಮತ್ತು ಶಾಸಕರ ಹೆಸರೂ ತಳಕು ಹಾಕಿಕೊಂಡಿರುವುದನ್ನು ನೋಡಿದರೆ ಸರ್ಕಾರಗಳ ಜಾಣಮೌನದ ಹಿಂದಿನ ಅರ್ಥ ಹೊಳೆದೀತು. ವ್ಯವಹಾರಿಕ ಗೆಳೆತನ ಹೊಂದಿದ್ದಲ್ಲದೆ, ಸಾವಿರಾರು ಜನರಿಗೆ ಐಎಂಎ ಸಂಸ್ಥೆಯಲ್ಲಿ ಹೂಡಿಕೆ ಮಾಡುವಂತೆ ಪುಸಲಾಯಿಸಿದ್ದ ರಾಜಕೀಯ ಮುಖಂಡರು, ವಂಚನೆ ಬಯಲಾಗುತ್ತಿದ್ದಂತೆ ತಾರಮ್ಮಯ್ಯ ಎಂಬಂತೆ ಕೈಯಾಡಿಸುತ್ತಿದ್ದಾರೆ. ಬ್ಯಾಂಕೇತರ ಹಣಕಾಸು ಸಂಸ್ಥೆಗಳ ನಿಯಂತ್ರಣಕ್ಕೆ ನಿಯಮಗಳಿದ್ದರೂ ಅವುಗಳು ಪಾಲನೆ ಆಗದಿರುವುದು ದಿಟ. ವಂಚಕರು ಹಾಗೂ ಅಧಿಕಾರಿಗಳ ನಡುವಿನ ಅನೈತಿಕ ಮೈತ್ರಿ ಗುಟ್ಟಿನ ಸಂಗತಿ ಆಗಿಯೇನೂ ಉಳಿದಿಲ್ಲ. ದಿವಾಳಿ ಎದ್ದಿರುವ ಐಎಂಎ ಸಂಸ್ಥೆಯ ಸಂಸ್ಥಾಪಕನನ್ನು ಹಿಡಿದು ತಂದರೂ ಅದೀಗ 'ಊರು ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ'! ಹೂಡಿಕೆದಾರರು ಕಳೆದುಕೊಂಡಿರುವ ಕೋಟ್ಯಂತರ ರೂಪಾಯಿಯ ದೊಡ್ಡ ಮೊತ್ತವನ್ನು ನೋಡಿದಾಗ ಅವರ ಹಣ ಸಂಪೂರ್ಣವಾಗಿ ಸಿಗುವುದು ಸಂಶಯವೇ.

ಐಎಂಎ ಪ್ರಕರಣ ಜನರಿಗೆ ಪಾಠವಾಗಬೇಕು. ಹೂಡಿಕೆಗೆ ಪ್ರತಿಯಾಗಿ ದಿಢೀರ್ ಆಗಿ ದೊಡ್ಡಮೊತ್ತ ಸಿಗದಿದ್ದರೂ ರಾಷ್ಟ್ರೀಕೃತ ಬ್ಯಾಂಕ್, ಅಂಚೆ ಕಚೇರಿಯಂತಹ 'ಸುರಕ್ಷಿತ ತಾಣ'ಗಳನ್ನು ಹುಡುಕಿಕೊಳ್ಳುವುದು ಒಳಿತು. ಇದಕ್ಕೆ ಹೊರತಾಗಿ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆ ಮಾಡುವುದೇ ಆದಲ್ಲಿ ಅವುಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್, ಸೆಬಿಯಂತಹ ಸಂಸ್ಥೆಗಳ ಅನುಮತಿ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಎಲ್ಲಿಯವರೆಗೆ ನಾಮ ಹಾಕಿಸಿಕೊಳ್ಳುವವರು ಇರುತ್ತಾರೋ ಅಲ್ಲಿಯವರೆಗೆ ಹಾಕುವವರೂ ಇರುತ್ತಾರೆ ಎಂಬುದನ್ನು ಸದಾ ನೆನಪಿಡಬೇಕು.

■ ಪ್ರವೀಣ ಕುಲಕರ್ಣಿ